# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 06.02.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಡಾ|| ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಸುಮಂತ್ ಗೌಡ ಸಿ. ಎಸ್., ಸಹಾಯಕ ಅಭಿಯಂತರರು, ವಾರ್ಡ್ ನಂ.42 ಹಾಗೂ ಸದಸ್ಯ ಕಾರ್ಯದರ್ಶಿ
3. ಮಣಿ ಮೇಘಲೈ, ಕಿರಿಯ ಆರೋಗ್ಯ ಪರಿವೀಕ್ಷಕರು,
4. ದೀಪಕ್.ಹೆಚ್.ಸಿ, ಸ.ಅ.ಜಲಮಂಡಳಿ
5. ಎಂ.ನಾಗರಾಜು.ಬೆಸ್ಕಾಂ
6. ರಾಜೇಶ್ವರಿ ಆರಕ್ಷಕ ನಿರೀಕ್ಷಕರು,ನಂದಿನಿ ಬಡಾವಣೆ.
7. ನಾರಾಯಣಸ್ವಾಮಿ, ಮೇಲ್ವಿಚಾರಕರು
8. ದೇವರಾಜ್, ಮೇಲ್ವಿಚಾರಕರು
9. ದಾಕ್ಷಯಣಿ ಲಿಂಕ್ ವರ್ಕರ್
10. ಪ್ರಮೀಳ ಲಿಂಕ್ ವರ್ಕರ್

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

ಕಸದ ಹಾಗೂ ಬ್ಲಾಕ್ ಸ್ಪಾಟ್ ಗಳಲ್ಲಿ ಸಾರ್ವಜನಿಕರು ಕಸ ಹಾಕುತ್ತಿರುವುದು ಕಂಡುಬಂದಿದ್ದು, ಮಾರ್ಷಲ್ ಗಳ ಸಹಾಯದಿಂದ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಮೇಲ್ವಿಚಾರಕರು ಸೂಕ್ತ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷಕರು ಸೂಚಿಸಿದರು.

**ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.42**

ವಾರ್ಡ್‌ನ ಸದಸ್ಯರಾದ ಸಹದೇವನ್ ರವರು ಮಾತನಾಡಿ ಲಕ್ಷ್ಮಿದೇವಿನಗರ.ಕೆ.ರಾಮಣ್ಣ ಬಡಾವಣೆಯ 2ನೇ ಅಡ್ಡರಸ್ತೆಯಲ್ಲಿ ಸ್ವಾಮಿ ಎಂಬುವರ ಮನೆಯ ಮುಂದೆ ವಿದ್ಯುತ್ ದೀಪದ ಕಂಬವು ಬಾಗಿರುವುದು ಕಂಡುಬಂದಿದ್ದು, ಸ್ಥಳದಲ್ಲೇ ಹಾಜರಿದ್ದ ಬೆಸ್ಕಾಂ ಅಧಿಕಾರಿಗೆ ಸೂಕ್ತ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು

**ಕ್ರಮ: ಕಿರಿಯ ಅಭಿಯಂತರರು ಬೆಸ್ಕಾಂ ವಾರ್ಡ್ ನಂ.42**

Scanned by CamScanner

ಡಾ॥ ರೇಣುಕಾ ಪ್ರಸಾದ್ ರವರು ಮಾತನಾಡಿ ಸರ್ಕಾರಿ ಆಸ್ಪತ್ರೆ ರಸ್ತೆಯನ್ನು ಆದಷ್ಟು ಬೇಗ ಸರಿಪಡಿಸಲು ಹಾಗೂ ಕ್ಷಯರೋಗದ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಬೇಕಾಗಿರುವುದರ ಬಗ್ಗೆ ಸದಸ್ಯರಲ್ಲಿ ಕೋರಲಾಗಿ ಈಗಾಗಲೇ ಸ.ಕಾ.ಅ ರವರಿಗೆ ಇದರ ಬಗ್ಗೆ ಮನದಟ್ಟುಮಾಡಿ ಕೂಡಲೇ ರಸ್ತೆ ದುರಸ್ತಿಯನ್ನು ನಿರ್ವಹಿಸುವಂತೆ ಕೋರಲಾಗಿದೆ ಎಂದು ಅಧ್ಯಕ್ಷಕರು ವಿವರಿಸಿ ಸದರಿ ಕಾರ್ಯವನ್ನು ನಿಯಮಿತವಾಗಿ ಪಾಲನೆ ಮಾಡುವಂತೆ ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ.42**

ಸುಮಂತ್ ಗೌಡ, ಸಹಾಯಕ ಅಭಿಯಂತರರು ರವರು ಮಾತನಾಡಿ ರಾಜ್ ಕುಮಾರ್ ಸಮಾಧಿಯ ಎದುರು ಸಾರ್ವಜನಿಕರು ತಿರುಗಾಡುವ ಅಂಡರ್ ಪಾಸ್ (ಕೆಳರಸ್ತೆ) ನಲ್ಲಿ ಬೀದಿದೀಪಗಳು ಇಲ್ಲದಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

**ಕ್ರಮ: ಸಹಾಯಕ ಅಭಿಯಂತರರು, ಬೀದಿದೀಪಗಳು ವಾರ್ಡ್ ನಂ.42**

ಧನಂಜಯ ಎಂಬುವರ ಮೇಲೆ ಬಂದಿರುವ ದೂರಿನ ಮೇರೆಗೆ ಮಾನ್ಯ ಅಧ್ಯಕ್ಷರು ಸ್ಥಳಪರಿಶೀಲನೆ ನಡೆಸಿ ಜಾನುವಾರುಗಳ ಕಸ ಮತ್ತು ಸಗಣಿಯನ್ನು ಬೇರ್ಪಡಿಸಿ ಪ್ರತಿದಿನ 3 ಬಾರಿ ಸ್ವಚ್ಛಗೊಳಿಸಿ ಫೆನಾಯಿಲ್ ಹಾಕಿ ಅಕ್ಕಪಕ್ಕದವರಿಂದ ದೂರುಬಾರದಂತೆ ಮತ್ತು ಮುಖ್ಯವಾಗಿ ದನಕರುಗಳನ್ನು ರಸ್ತೆಗೆ ಬಿಡುವುದಾಗಲೀ ಅಥವಾ ರಸ್ತೆಗಳಲ್ಲಿ ಕಟ್ಟುವುದಾಗಲೀ ಮಾಡಿದಲ್ಲಿ ಕೂಡಲೇ ತಮ್ಮ ಜಾನುವಾರುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಾಗುವುದೆಂದು ದನಗಳ ಮಾಲೀಕರಿಗೆ ಎಚ್ಚರಿಸಿದರು.

**ಕ್ರಮ: ಜಾನುವಾರು ಅಧಿಕಾರಿ, ಪಶುಪಾಲನಾ ವಿಭಾಗ, ವಾರ್ಡ್ ನಂ.42**

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸುಮಂತ್ ಗೌಡ ಸಿ. ಎಸ್.)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:42

(ಡಾ॥ ಎಂ. ಜಿ. ಹಳ್ಳ ಶಿವರಾಮ್)
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:42

Scanned by CamScanner